**ಸಿ.ಸಿ. ನಂಬರಃ 3136/2025** **ಸಾಕ್ಷಿಃ ಪಿ. ಡಬ್ಲ್ಯೂಃ 1**

**(ಇಂದು ತಾಃ 26-02-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**(ಸಾಕ್ಷಿಯ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮುಖ್ಯ ವಿಚಾರಣೆಯಾಗಿ ಪರಿಗಣಿಸಲಾಗಿರುತ್ತದೆ.)**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ.ಎಸ್.ಜಿ. ವಕೀಲರಿಂದ,**

ನಾನು ಫಿರ್ಯಾದಿ ಸೊಸೈಟಿಯಲ್ಲಿ ಕಳೆದ 27 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಕಳೆದ 3 ವರ್ಷಗಳಿಂದ ಸಹಾಯಕ ಕಾರ್ಯ ನಿರ್ವಾಹಕ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ದೂರಿನಲ್ಲಿ ಹೇಳಿದ ಸಾಲಕ್ಕೆ ವಾರ್ಷಿಕ 15 ಶೇಕಡಾ ಬಡ್ಡಿ ಆಕರಣೆ ಮಾಡಿರುತ್ತೇವೆ. ಆರೋಪಿ ಫಿರ್ಯಾದಿ ಸೊಸೈಟಿಯಲ್ಲಿ ಬೇರೆಯವರ ಸಾಲಕ್ಕೆ ಜಾಮೀನುದಾರನಾಗಿ ಇರಲಿಲ್ಲ. ದೂರಿನಲ್ಲಿ ಹೇಳಿದ ಸಾಲಕ್ಕಿಂತ ಪೂರ್ವದಲ್ಲಿ ಆರೋಪಿ ಬೇರೆ ಸಾಲವನ್ನು ಫಿರ್ಯಾದಿ ಸೊಸೈಟಿಯಲ್ಲಿ ಪಡೆದಿರುವುದಿಲ್ಲ. ಆರೋಪಿಗೆ ಮನೆ ರಿಪೇರಿಯ ಉದ್ದೇಶಕ್ಕಾಗಿ ವೈಯಕ್ತಿಕ ಸಾಲ ನೀಡಿರುತ್ತೇವೆ.

2. ಆರೋಪಿಗೆ ಸಾಲವನ್ನು ನೀಡುವಾಗ ಆರೋಪಿಯಿಂದ ಮೊದಲು ಸಾಲದ ಅರ್ಜಿ ಪಡೆದಿರುತ್ತೇವೆ. ನಂತರ ಸಾಲದ ಹಣವನ್ನು ನೀಡುವಾಗ ಸಾಲದ ಕರಾರು, ಡಿ.ಪಿ. ನೋಟ್, ಸಾಲದ ಹಣ ಪಾವತಿಸಿದ ಬಗ್ಗೆ ರಶೀದಿಯನ್ನು ಪಡೆದಿರುತ್ತೇವೆ. ಸಾಲದ ಅರ್ಜಿಯನ್ನು ಆರೋಪಿಯೇ ತುಂಬಿಸಿಕೊಂಡು ತಂದು ಕೊಟ್ಟಿರುತ್ತಾರೆ. ಸಾಲದ ಅರ್ಜಿಯನ್ನು ನಾವು ಪರಿಶೀಲನೆ ಮಾಡಿರುತ್ತೇವೆ. ನಾನು ಹೇಳಿದಂತೆ ಆರೋಪಿಯು ಯಾವುದೇ ಸಾಲದ ಅರ್ಜಿಯನ್ನು ಫಿರ್ಯಾದಿ ಸೊಸೈಟಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**